ಕಿಕ್ಕಿರಿದು ತುಂಬಿದ್ದವು.

ಕಾರ್ಖಾನೆಯಿದ್ದ ಬಸ್ ಸ್ಟಾಪಿನ ಬಳಿ ಬಸ್ಸು ಇಳಿದು ವಿಶಾಲವಾದ ರಸ್ತೆಯಲ್ಲಿ ಏಕಾಂಗಿಯಾಗಿ ನಡೆಯತೊಡಗಿದೆ. ಸುತ್ತಲೂ ಬರಿಯ ಕಾರ್ಖಾನೆಗಳು. ಅವುಗಳಲ್ಲಿ ಕೆಲವೊಂದರ ಕೊಳವೆಗಳಿಂದ ಕಪ್ಪು ಹೊಗೆ ಎತ್ತರಕ್ಕೆ ಚಿಮ್ಮುತಿತ್ತು. ಕೆಲವೊಂದರಿಂದ ಯಂತ್ರಗಳ ಕರ್ಕಶ ಸದ್ದು ಹೊರಬರುತಿತ್ತು. ರಸ್ತೆಯಲ್ಲಿ ಯಾರೂ ಮನುಷ್ಯರು ಕಾಣಿಸಲಿಲ್ಲ. ಕಾರ್ಖಾನೆಗಳ ದೊಡ್ಡ ಗೇಟುಗಳು ಮುಚ್ಚಿದ್ದವು. ಅವುಗಳ ಬದಿಯಲ್ಲಿದ್ದ ಗೂಡುಗಳಲ್ಲಿ ಭದ್ರತಾ ಸಿಬ್ಬಂದಿ ಕುಳಿತಿದ್ದುದು ರಸ್ತೆಗೆ ಕಾಣಿಸುತಿತ್ತು. ನಾನು ಕಾರ್ಖಾನೆಗಳ ಎದುರಿಗಿದ್ದ ಒಂದೊಂದೇ ನಾಮಫಲಕಗಳನ್ನು ವೀಕ್ಷಿಸಿಕೊಂಡು ಮುಂದೆ ಹೋಗುತ್ತಿದ್ದೆ. ಪ್ರತಿ ಕ್ಷಣದಲ್ಲಿಯೂ ನನ್ನೊಳಗಿನ ಧೈರ್ಯ ನನಗರಿವಿಲ್ಲದಂತೆಯೇ ಕುಸಿಯುತಿತ್ತು. ಅವರು ನನ್ನನ್ನು ನಿರಾಕರಿಸಿಬಿಟ್ಟರೆ.. ಎಂಬ ಋಣಾತ್ಮಕ ಯೋಚನೆಯಿಂದ ನಾನು ಕ್ಷಣ ಕ್ಷಣಕ್ಕೂ ಅಧೀರಳಾಗುತ್ತಿದ್ದೆ. ಅವರ ಕಾರ್ಖಾನೆಯ ದೊಡ್ಡ ನಾಮಫಲಕವನ್ನು ಓದಿಕೊಂಡು ಒಳಗಿನ ಏನೂ ಕಾಣಿಸದಂತೆ ಮುಚ್ಚಿದ್ದ ಎತ್ತರದ ಕಬ್ಬಿಣದ ಗೇಟಿನ ಎದಿರು ನಿಂತಾಗ ನನ್ನ ದೇಹವೆಲ್ಲಾ ಸಣ್ಣಗೆ ಕಂಪಿಸುತಿತ್ತು, ಬಾಯಿಯೆಲ್ಲಾ ಒಣಗಿ ಹೋದಂತಾಗಿ ನನ್ನ ನಾಲಿಗೆಯಿಂದ ತುಟಿಗಳನ್ನು ಸವರಿ ಒದ್ದೆ ಮಾಡಿಕೊಂಡೆ.

ನಾನು ಗೇಟಿನ ಎದಿರು ನಿಂತದ್ದನ್ನು ಭದ್ರತಾ ಕಚೇರಿಯ ಒಳಗಿದ್ದ ಸಿಬ್ಬಂದಿಯೊಬ್ಬರು ಕಿಟಕಿಯಿಂದ ನೋಡಿದರು. ಅವರು ತಕ್ಷಣವೇ ಹೊರಗೆ ಬಂದು ಗೇಟನ್ನು ಸ್ವಲ್ಪವೇ ತೆರೆದು ಏನು ಬೇಕಾಗಿತ್ತು..? ಎಂದು ತುಸು ಗತ್ತಿನಲ್ಲಿಯೇ ಕೇಳಿದ್ದನ್ನು ಕಂಡು ನನಗೆ ಅತೀವ ಹೆದರಿಕೆಯಾಯಿತು. ಅವರನ್ನು ಕತ್ತೆತ್ತಿ ನೋಡದೆ ಪರ್ಸ್‌ನಲ್ಲಿದ್ದ ವಿಸಿಟಿಂಗ್ ಕಾರ್ಡ್ ತೋರಿಸಿ ಸು.. ಸು.. ಸುನಿಲ್ ಕುಮಾರ್ ಅವರನ್ನ ನೋಡಬೇಕಿತ್ತು.. ಎಂದು ನಡುಗುತ್ತಿದ್ದ ದನಿಯಲ್ಲಿ ನುಡಿದೆ. ನನ್ನ ದನಿಯಲ್ಲಿದ್ದ ಭೀತಿಯನ್ನು ಗುರುತಿಸಿಯೋ ಏನೋ ಭದ್ರತಾ ಸಿಬ್ಬಂದಿ ನಿಮ್ಮ ಹೆಸರು.. ಎಂದು ತುಸು ಮೆದುವಾಗಿ ಕೇಳಿದರು. ಹೇಮಾ.. ಹೇಮಾವತಿ.. ಎಂದೆ. ಒಳಗೆ ಬನ್ನಿ.. ಎಂದು ಗೇಟು ತೆರೆದರು. ಅವರ ಹಿಂದೆಯೇ ಭದ್ರತಾ ಕಚೇರಿಯ ಒಳಗೆ ಹೋದೆ. ಮೇಜಿನ ಮೇಲಿದ್ದ ಫೋನಿನಲ್ಲಿ ವಿಷಯ ತಿಳಿಸಿ ಮಾತನಾಡಿ ಎಂದು ನನಗೆ ಫೋನು ಕೊಟ್ಟರು. ಅತ್ತಲಿಂದ ಅವರು ಮಾತನಾಡಿ ಸಂಜೆ ಐದು ಗಂಟೆಗೆ ಸಿಗುತ್ತೇನೆ ಎಂದು ಯಾವುದೋ ಹೋಟೇಲಿನ ಹೆಸರು ಹೇಳಿದರು. ತುಂಬಾ ದಿನಗಳ ಮೇಲೆ ಅವರ ದನಿಯನ್ನು ಕೇಳಿ ನನಗೆ ಹೋದ ಜೀವ ಬಂದಂತಾಯಿತು. ಆಯ್ತು ಎಂದು ಫೋನು ಇಟ್ಟು ಹೊರಗೆ ಬಂದೆ.

ಅವರ ನಿರ್ಧಾರವನ್ನು ತಿಳಿದುಕೊಳ್ಳದೇ ಚಡಪಡಿಸುತ್ತಲೇ ರೂಮಿಗೆ ಹೋಗಿ ಮತ್ತೆ ಬರಲು ನನ್ನ ಮನಸ್ಸು ಒಪ್ಪಲಿಲ್ಲ. ಕೈಯ್ಯಲ್ಲಿದ್ದ ವಾಚಿನಲ್ಲಿ ಪದೇ ಪದೇ ಸಮಯ ನೋಡಿಕೊಂಡು ಅಲ್ಲಿಯೇ ಸುತ್ತಾಡತೊಡಗಿದೆ. ಸಂಜೆ ಐದು ಗಂಟೆಯಾಗುವುದರಲ್ಲಿ ದೈಹಿಕ ಆಯಾಸಕ್ಕಿಂತ ಹೆಚ್ಚಾಗಿ ಮಾನಸಿಕ ತುಮುಲದಿಂದ ನಾನು ಬಳಲಿ ಹೋಗಿದ್ದೆ. ಮಧ್ಯಾಹ್ನದ ಊಟವಾಗಲೀ, ಬೆಳಗಿನ ತಿಂಡಿಯನ್ನೂ ತಿನ್ನದಿರುವುದರ ನೆಪಾಗಲೀ ನನಗೆ ಆಗಲಿಲ್ಲ. ನನಗೆ ಅವರನ್ನು ಕಂಡು ನನ್ನ ಪ್ರೀತಿಯನ್ನು ಅವರೊಂದಿಗೆ ನಿವೇದಿಸಿಕೊಳ್ಳಬೇಕೆನ್ನುವ ಹೃದಯದ ಹಂಬಲವನ್ನು ಬಿಟ್ಟು ಬೇರೇನೂ ಬೇಕಾಗಿರಲಿಲ್ಲ. ಐದು ಗಂಟೆಗೆ ಇನ್ನೂ ಐದು ನಿಮಿಷಗಳಿದ್ದಂತೆಯೇ ಕಾರ್ಖಾನೆಯ ಗೇಟಿನಿಂದ ಸ್ವಲ್ಪ ದೂರದಲ್ಲಿ ಕಾಂಪೌಂಡಿನ ಬದಿಗೆ ನಿಂತುಕೊಂಡೆ. ಅವರು ಕಾರಿನಲ್ಲಿ ಬಂದು ನನ್ನನ್ನು ಹೆಸರು ಹಿಡಿದು ಕೂಗಿದರು. ನನಗೆ ಹಿಡಿಸಲಾರದಷ್ಟು ಸಂತೋಷವಾಗಿ ನನ್ನ ಕಣ್ಣುಗಳು ಹನಿಗೂಡಿದವು. ಕಾರು ಹತ್ತಿ ಅವರ ಪಕ್ಕದಲ್ಲಿ ಕುಳಿತೊಡನೆಯೇ ಅವರನ್ನು ತಬ್ಬಿಕೊಂಡು ಅವರ ಎದೆಯಲ್ಲಿ ಮುಖವಿಟ್ಟು ಜೋರಾಗಿ ಅತ್ತು ಬಿಡಬೇಕು ಎಂದು ತೀವ್ರವಾಗಿ ಅನಿಸಿತು. ಆದರೆ ನನ್ನನ್ನು ನಾನು ನಿಯಂತ್ರಿಸಿಕೊಂಡು ಮೌನವಾಗಿ ಕುಳಿತೆ.

ಭಕ್ತೆಯೊಬ್ಬಳು ದೇವರ ವಿಗ್ರಹದ ಬಳಿ ಕುಳಿತು ತನ್ನ ಅಪಾರ ಭಕ್ತಿಯನ್ನು ಸಮರ್ಪಿಸಿಕೊಂಡಂತೆ ನಾನು ಅವರೆದುರು ನನ್ನ ನಿಷ್ಕಲ್ಮಶ ಪ್ರೀತಿಯನ್ನು ಅನಾವರಣ ಮಾಡಿದೆ. ಆದರೆ ಮುಂದೆ ಅವರು ಆಡಿದ ಒಂದೊಂದು ಮಾತುಗಳಿಂದ ನಾನೇ ಕಟ್ಟಿಕೊಂಡ ಪ್ರೀತಿಯ ಸೌಧ ಹಂತ ಹಂತವಾಗಿ ಕುಸಿದು ನೆಲಕ್ಕುರುಳಿ ನನ್ನ ಕಣ್ಣೆದುರಿಗೇ ನೆಲಸಮವಾಯಿತು. ಅವರಾಡಿದ ಮಾತುಗಳಲ್ಲಿ ಯಾವುದೇ ಕೃತಕತೆ ಇರಲಿಲ್ಲ. ಕೃತ್ರಿಮತೆ ಇರಲಿಲ್ಲ. ಎಲ್ಲೂ ಬಾಗಿದಂತೆ ಕಾಣಲಿಲ್ಲ. ಎಲ್ಲವೂ ಗುಂಡು ಸಿಡಿದಂತೆ ನೇರವಾಗಿದ್ದವು. ಅವರು ನನ್ನ ಪ್ರೀತಿಯ ಸೌಧವನ್ನು ನಾನೊಬ್ಬಳೇ ಕಟ್ಟಿಕೊಂಡಿದ್ದು.. ಅದರಲ್ಲಿ ಅವರು ಎಂದೂ ಒಂದು ಮರಳಿನ ಕಣವನ್ನೂ ತಂದು ಹಾಕಲಿಲ್ಲವೆಂಬುದನ್ನು ದೃಢಪಡಿಸಿದರು. ನಾನು ಅವರ ಮಾತುಗಳಿಗೆ ಉತ್ತರ ನೀಡಲಾಗದೆ ಸೋತು ಹೋಗಿ ಕಣ್ಣೀರುಗರೆದೆ. ಆದರೆ ನನ್ನ ಕಣ್ಣೀರಿಗೆ ಅವರ ಮನಸ್ಸು ಕರಗಲಿಲ್ಲ. ಅತೀವ ಹತಾಶಳಾಗಿ ಏನೂ ಮಾಡಲು ತೋಚದೆ ನನ್ನ ಪ್ರೀತಿಯಂತೂ ಭ್ರಮೆಯಲ್ಲಿಯೇ ಕೊನೆಗೊಂಡಿತು.. ಅವರಾದರೂ ಸುಖವಾಗಿರಲಿ ಎಂದು ಹಾರೈಸಿ ಅವರನ್ನು ಬೀಳ್ಕೊಟ್ಟೆ. ಆದರೆ ಇನ್ನು ಮುಂದೆ ಅವರು ನನ್ನ ಬದುಕಿನಲ್ಲಿ ಎಂದೂ ಬರಲಾರರು.. ಎನ್ನುವುದನ್ನು ನೆನೆನೆನೆದು ನನ್ನ ಮನಸ್ಸು ಇನ್ನಿಲ್ಲದಂತೆ ಪರಿತಪಿಸತೊಡಗಿತು. ನನ್ನನ್ನು ಸ್ವೀಕರಿಸದಿದ್ದರೂ ನನ್ನ ಹೃದಯದಲ್ಲಿ ಅವರು ಗಟ್ಟಿಯಾಗಿ ಕುಳಿತಿದ್ದರು. ಅವರ ನೆನಪೊಂದೇ ನನ್ನ ಬದುಕಿನುದ್ದಕ್ಕೂ ಶಾಶ್ವತವೆಂದುಕೊಂಡ ಕ್ಷಣದಿಂದ ಮತ್ತೆ ನನ್ನ ಕಣ್ಣುಗಳಿಂದ ಕಣ್ಣೀರು ಕೋಡಿಯಾಗಿ ಹರಿಯತೊಡಗಿತು.

ಗುಂಡು ತಗುಲಿದ ಪ್ರಾಣಿಯೊಂದು ಪ್ರಾಣ ಉಳಿಸಿಕೊಳ್ಳುವ ಸಲುವಾಗಿ ಓಡಿಹೋಗಿ ತನ್ನ ವಾಸಸ್ಥಾನವನ್ನು ಸೇರಿಕೊಂಡಂತೆ ಬಂದು ನನ್ನ ರೂಮು ಸೇರಿಕೊಂಡೆ. ಬಾಗಿಲನ್ನು ಮುಚ್ಚಿದವಳೇ ನೆಲದ ಮೇಲೆ ಉರುಳಿಕೊಂಡು ನನ್ನ ಎರಡೂ ಕೈಗಳನ್ನು ನನ್ನ ತೊಡೆಗಳ ನಡುವೆ ಬಿಗಿಯಾಗಿ ಹಿಡಿದು ಮುರುಟಿಕೊಂಡು ಮಲಗಿದೆ. ನನ್ನ ಕಣ್ಣುಗಳಲ್ಲಿ ನೀರು ಇಂಗಿಹೋಗಿತ್ತು. ಕಣ್ಣು ಬಿಟ್ಟು ನೋಡಿದರೆ ಎಲೆಲ್ಲೂ ಅವರ ಪ್ರತಿಬಿಂಬವೇ ಕಾಣಿಸುತಿತ್ತು. ಅದನ್ನು ನೋಡಲಾಗದೆ ಕಣ್ಣುಮುಚ್ಚಿದೆ. ಇಡೀ ಭೂಮಿಯೇ ಗರಗರನೆ ಸುತ್ತಿದಂತೆ ಭಾಸವಾಗತೊಡಗಿತು. ತೀವ್ರವಾಗಿ ಹೆದರಿ ಮುಚ್ಚಿದ ಕಣ್ಣುಗಳನ್ನು ತೆರೆದೆ. ನನ್ನ ಪ್ರತಿರೂಪವೊಂದು ಎದುರಿನಲ್ಲಿ ನಿಂತು ನನ್ನನ್ನೇ ನೋಡಿ ಗಹಗಹಿಸಿ ನಗುತಿತ್ತು.

ಅಯ್ಯೋ ಹೇಮಾವತಿಯೆಂಬ ಹುಚ್ಚು ಹೆಣ್ಣೇ.. ಅವರು ನಿನ್ನನ್ನು ಪ್ರೀತಿಸಲು ನಿನಗೆ ಯಾವ ಅರ್ಹತೆಯಿದೆ..? ಆಸ್ತಿಯೇ..? ಅಂತಸ್ತೇ..? ಉನ್ನತ ವಿದ್ಯೆಯೇ..? ಕಣ್ಣುಕುಕ್ಕುವ ಉದ್ಯೋಗವೇ..? ನಿನ್ನ ಅಪ್ಪ ಸಮಾಜದಲ್ಲಿ ಗಣ್ಯ ವ್ಯಕ್ತಿಯೇ..? ಯಾವುದೂ ಇಲ್ಲ.. ನೀನೊಬ್ಬ ನತದೃಷ್ಟ ಹೆಣ್ಣು.. ಬಡತನದಲ್ಲಿ ಹುಟ್ಟಿ ಬಡತನದಲ್ಲಿಯೇ ಬೆಳೆದವಳು.. ಒಂದು ಪದವಿಯನ್ನೂ ಪಡೆಯಲಾರದವಳು.. ನೀನು ಅತಿಯಾಗಿ ಪ್ರೀತಿಸುತ್ತಿದ್ದ ನಿನ್ನ ಅಪ್ಪನಿಗೆ ಏನಾಯಿತು..? ನಿನ್ನ ಅಮ್ಮ ಸುಖವಾಗಿದ್ದಾಳೆಯೇ..? ನಾನು ಸುಂದರಿ ಎಂದು ಬೀಗುತಿದ್ದೆಯಲ್ಲಾ.. ನಿನಗೆ ತಕ್ಕ ಶಾಸ್ತಿಯಾಯಿತು.. ತಕ್ಕ ಶಾಸ್ತಿಯಾಯಿತು..

ನನ್ನ ಪ್ರತಿರೂಪ ನನ್ನನ್ನು ಅಣಕಿಸಿ ನಗುತಿತ್ತು..

ಆ ರಾತ್ರಿಯೆಲ್ಲಾ ಕಣ್ಣುಮುಚ್ಚಿದ್ದೆನೋ, ತೆರೆದುಕೊಂಡಿದ್ದೆನೋ ನನಗೆ ತಿಳಿಯಲಿಲ್ಲ. ಮುಚ್ಚಿದ್ದ ಕಿಟಕಿಯಿಂದ ಬೆಳಕು ಬಂದ ಎಷ್ಟೋ ಹೊತ್ತಿನ ಮೇಲೆ ಬಾಗಿಲು ಬಡಿದ ಸದ್ದಾಯಿತು. ಅದು ಸೀತೆಯೆಂಬುದು ಮನದಟ್ಟಾಯಿತು. ಅವಳನ್ನು ಬಿಟ್ಟು ಈ ನತದೃಷ್ಟಳನ್ನು ಇನ್ನಾರು ತಾನೇ ಹುಡುಕಿಕೊಂಡು ಬರುತ್ತಾರೆ..? ನಿನ್ನೆ ಫ್ಯಾಕ್ಟರಿಗೆ ಹೋಗಿಲ್ಲದ ಕಾರಣ ತಿಳಿಯಲು ಬಂದಿರುತ್ತಾಳೆ.. ಎದ್ದೇಳಲು ದೇಹದಲ್ಲಿ ಶಕ್ತಿಯಿರಲಿಲ್ಲ. ಮೈಯ್ಯೆಲ್ಲಾ ಕಾದ ಹೆಂಚಿನಂತೆ ಸುಟ್ಟುಹೋಗುತಿತ್ತು. ಸಾವರಿಸಿಕೊಂಡು ಎದ್ದು ಬಾಗಿಲು ತೆಗೆದೆ. ನನ್ನ ಸ್ಥಿತಿಯನ್ನು ಕಂಡು ಕಂಗಾಲಾದ ಸೀತೆ 'ಅಯ್ಯೋ ಹೇಮಾ ಏನಾಯಿತೇ..?' ಎಂದು ಆತಂಕದಿಂದ ಉದ್ಗರಿಸಿದಳು. ಅವಳಿಗೆ ನಾನು ಏನನ್ನೂ ಹೇಳುವ ಸ್ಥಿತಿಯಲ್ಲಿರಲಿಲ್ಲ. 'ಸ್ವಲ್ಪ ಜ್ವರ ಬಂದಿದೆ ಕಣೇ..' ಎಂದೆ. 'ಅಯ್ಯೋ.. ಎಂತಾ ಗೂಬೇನೆ ನೀನು.. ಒಂದು ಫೋನಾದ್ರೂ ಮಾಡಬಾರದಿತ್ತಾ..' ಎಂದು ನನ್ನ ಹಣೆ ಮುಟ್ಟಿ ನೋಡಿ ಸುಟ್ಟು ಹೋಗ್ತಾ ಇದೀಯಲ್ಲೇ.. ಎಂದು ಅತೀವ ಗಾಬರಿಗೊಂಡಳು. ಅವಳು ಹೇಳಿದ್ದು ನಿಜ.. ನನ್ನ ದೇಹವೂ ಸುಡುತಿತ್ತು.. ಮನಸ್ಸೂ ಸುಡುತಿತ್ತು..

'ಲೇ ಮೊದಲು ಸ್ವಲ್ಪ ಇಡ್ಲಿನಾದರೂ ತಿನ್ನೇ.. ಮೆಡಿಕಲ್ ಸೆಂಟರಿಗೆ ಹೋಗೋಣ.' ಎಂದು ಮಧ್ಯಾಹ್ನಕ್ಕೆಂದು ಅವಳು ತಂದಿದ್ದ ಬುತ್ತಿ ಬಿಚ್ಚಿದಳು. ಎರಡು ಇಡ್ಲಿ ತಿಂದು ನೀರು ಕುಡಿದೆ. ಎದ್ದು ಮುಖ ತೊಳೆದು ತಲೆಬಾಚಿಕೊಂಡು ಅವಳೊಂದಿಗೆ ಹೊರಟೆ. ಆಟೋವೊಂದರಲ್ಲಿ ಫ್ಯಾಕ್ಟರಿ ತಲುಪಿ ಮೆಡಿಕಲ್ ಸೆಂಟರಿಗೆ ಹೋದೆವು. ವೈದ್ಯರು ಒಂದಷ್ಟು ಮಾತ್ರೆ ಕೊಟ್ಟು ವಿಶ್ರಾಂತಿ ತೆಗೆದುಕೊಳ್ಳುವಂತೆ ಹೇಳಿದರು. ಅಂದು ಅರ್ಧದಿನ ಫ್ಯಾಕ್ಟರಿಯ ರೆಸ್ಟ್ ರೂಮಿನಲ್ಲಿಯೇ ಮಲಗಿದ್ದೆ.

ಆ ವಾರ ಊರಿಗೆ ಹೋದಾಗ ಮತ್ತೆ ಕೆಲಸಕ್ಕೆ ಹೋಗುವುದು, ಬೆಂಗಳೂರಿನಲ್ಲಿ ಇರುವುದು, ಬಸ್ಸು ಹತ್ತಿ ವಾರಕ್ಕೊಮ್ಮೆ ಊರಿಗೆ ಬರುವುದು